**ಕರ್ನಾಟಕ ಸರ್ಕಾರ**
**ತಾಂತ್ರಿಕ ಶಿಕ್ಷಣ ಇಲಾಖೆ**

ಸಂಖ್ಯೆ:ಬಿಟಿಇ/01/ಇಎಫ್ಎಸ್/2024-25

ಆಯುಕ್ತರ ಕಛೇರಿ,
ತಾಂತ್ರಿಕ ಪರೀಕ್ಷಾ ಮಂಡಳಿ,
ಅರಮನೆರಸ್ತೆ, ಬೆಂಗಳೂರು-01,
ದಿನಾಂಕ: 10-04-2024

**ಸುತ್ತೋಲೆ**

**ವಿಷಯ**: ತಾಂತ್ರಿಕ ಪರೀಕ್ಷಾ ಮಂಡಳಿ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್ ಮತ್ತು ಗಣಿಶಾಲೆಗಳು 2024ರ ಏಪ್ರಿಲ್/ಮೇ ಡಿಪ್ಲೋಮೊ ಸೆಮಿಸ್ಟರ್ ಪರೀಕ್ಷೆಗೆ ಬೇಕಾಗಿರುವ ಲೇಖನ ಸಾಮಗ್ರಿಗಳ ಬೇಡಿಕೆ ಪಟ್ಟಿಯನ್ನು ಇಮೇಲ್ ಕಳುಹಿಸಲು ಕೊನೆಯ ದಿನಾಂಕವನ್ನು ನಿಗದಿಪಡಿಸುವ ಬಗ್ಗೆ
**ಉಲ್ಲೇಖ**: ಈ-ಕಛೇರಿ ವಿಡಿಯೋ ಕಾನ್ಪರೆನ್ಸ್ ದಿನಾಂಕ:05-04-2024.

********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖದನ್ವಯ 2024ರ ಏಪ್ರಿಲ್/ಮೇ ಡಿಪ್ಲೋಮೊ ಸೆಮಿಸ್ಟರ್ ಪರೀಕ್ಷೆಗೆ, ಸಂಸ್ಥೆಗಳಿಗೆ ಅತೀ ಅವಶ್ಯಕವಾಗಿ ಬೇಕಾಗುವ ಲೇಖನ ಸಾಮಗ್ರಿಗಳ ಮಾಹಿತಿಯನ್ನು ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್ ಮತ್ತು ಗಣಿ ಶಾಲೆಗಳ ಪ್ರಾಂಶುಪಾಲರುಗಳು ಕಡ್ಡಾಯವಾಗಿ ಇಮೇಲ್ ಮೂಲಕ ಬೇಡಿಕೆ ಪಟ್ಟಿಯನ್ನು ದಿನಾಂಕ:**10/04/2024** ರ ಒಳಗೆ ಭರ್ತಿ ಮಾಡಿ ಕಳುಹಿಸುವಂತೆ ಸೂಚಿಸಲಾಗಿತ್ತು, ಆದರೆ ಬಹಳಷ್ಟು ಸಂಸ್ಥೆಗಳ ಪ್ರಾಚಾರ್ಯರು ನಿಗದಿತ ದಿನಾಂಕದೊಳಗೆ ಇಮೇಲ್ ಕಳುಹಿಸದೆ ಇರುವ ಪ್ರಯುಕ್ತ ಅವಶ್ಯಕವಾಗಿ ಬೇಕಾಗುವ ಲೇಖನ ಸಾಮಗ್ರಿಗಳ ಬೇಡಿಕೆ ಪಟ್ಟಿಯ ಮಾಹಿತಿಯನ್ನು ದಿನಾಂಕ: **15-04-2024** ರೊಳಗೆ ಇಮೇಲ್ ಕಳುಹಿಸಿಕೊಡುವಂತೆ ತಿಳಿಸಲಾಗಿದೆ. ಮುಂದೆ ಯಾವುದೇ ಕಾರಣಕ್ಕೂ ನಿಗದಿತ ದಿನಾಂಕವನ್ನು ವಿಸ್ತರಿಸಲಾಗುವುದಿಲ್ಲ ಎಂದು ತಿಳಿಸಲಾಗಿದೆ

ನಿಗದಿತ ದಿನಾಂಕದೊಳಗೆ ಬೇಡಿಕೆ ಪಟ್ಟಿಯನ್ನು ಭರ್ತಿ ಮಾಡಿ ಸಲ್ಲಿಸದಿದ್ದಲ್ಲಿ 2024ರ ಏಪ್ರಿಲ್/ಮೇ ಡಿಪ್ಲೋಮೊ ಸೆಮಿಸ್ಟರ್ ಪರೀಕ್ಷೆಗೆ ಲೇಖನ ಸಾಮಗ್ರಿಗಳು ಅವಶ್ಯಕತೆ ಇರುವುದಿಲ್ಲ ಎಂದು ಪರಿಗಣಿಸಲಾಗುವುದು ಮುಂದಿನ ಆಗುಹೋಗುಗಳಿಗೆ ಸಂಬಂಧ ಪಟ್ಟ ಸಂಸ್ಥೆಗಳ ಪ್ರಾಂಶುಪಾಲರೇ ನೇರ ಹೊಣೆಗಾರರಾಗಿರುತ್ತಾರೆ ಎಂದು ಈ ಮೂಲಕ ತಿಳಿಸಲಾಗಿದೆ.

email.ID: btejdexam@gmail.com.

ಕಾರ್ಯದರ್ಶಿ
ತಾಂತ್ರಿಕ ಪರೀಕ್ಷಾ ಮಂಡಳಿ, ಬೆಂಗಳೂರು.

**ಇವರಿಗೆ:**
ಎಲ್ಲಾ ಸರ್ಕಾರಿ/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್ ಮತ್ತು ಗಣಿ ಶಾಲೆಗಳ ಪ್ರಾಂಶುಪಾಲರುಗಳಿಗೆ ಇಲಾಖಾ ಜಾಲತಾಣ ಮುಖಾಂತರ ಮುಂದಿನ ಸೂಕ್ತ ಕ್ರಮಕ್ಕಾಗಿ.

**ಪ್ರತಿ:**
1. ಉಪ ನಿರ್ದೇಶಕರು/ಸಹಾಯಕ ನಿರ್ದೇಶಕರು/ಹಿರಿಯ ತಾಂತ್ರಿಕ ಸಹಾಯಕರು/ರಿಜಿಸ್ಟ್ರಾರ್(ಪರೀಕ್ಷೆ)
2. ಇ-ಆಡಳಿತ ವಿಭಾಗಕ್ಕೆ ಇಲಾಖಾ ಜಾಲತಾಣದಲ್ಲಿ ಪ್ರಕಟಿಸುವ ಸಲುವಾಗಿ.
3. ಕಚೇರಿ ಪ್ರತಿ.